**ಕವಿತೆ**



**ಲಲಿತಾ ಸಿದ್ಧಬಸವಯ್ಯ**

ಕಲೆ: ಎಸ್‌. ವಿ. ಹೂಗಾರ್



# ಹೂವರಸಿ

ಬೆಟ್ಟದ ಬುಡದ
ಕೋಟೆ ಮಾರಮ್ಮನ ಗುಡಿ
ಯ ಮುಂದಿತ್ತು ಒಂದೇ ಮರ
ಅರಿಸಿನ ಬಣ್ಣದ ಹೂ
ಹೃದಯಾಕಾರದ ಪತ್ರಾವಳಿ
ಜೊತೆಗೆ ಬುಗುರಿ ಕಾಯಿ

ತೀರ ಮೊನ್ನೆ ಮೊನ್ನೆಯ ದಿನ
ಗೊತ್ತಾಯ್ತು; ಹೂವರಸಿಯಂತೆ
ಅದರ ಹೆಸರು; ನಾವು ಹುವ್ವರ್ಚಿ
ಎನುತಿದ್ದೆವು; ಇಂಥ ಚೆಲುವೆಯ
ನದೆಂಥ ಕರ್ಕಶದಿ ಕರೆದೆವಲ್ಲ
ಎಂದು ಮುಖ ಮುಚ್ಚಿಕೊಂಡೆ

ಐದಳದ ಬುಡಕೆ
ದಟ್ಟ ಕಂದಿನ ಬೊಟ್ಟು
ಎಳೆಮಗುವಿನಂಗೈ ಅಗಲಕ್ಕೆ
ದೇಟಿಗೊಂದೇ ಹೂವು
ಗುತಿ ಗುತಿ ತೂಗುವುದಿಲ್ಲ
ಬಾಡುತ್ತ ರಕ್ತಗೆಂಪಿಗೆ ತಿರುಗುವೀ ಹರಿದ್ರೆ
ಮುದುರಿ ಉದುರಿದರೂ
ಇವಳ ಮಗ ಮಾತ್ರ
ಅಜ್ಜಿ ಸಾಕಿದ ಮೊಮ್ಮಗನ ಹಾಗೆ
ದೇಟಿಗಂಟಿಕೊಂಡೇ ಕೂತಿರುತ್ತಾನೆ

ಪಚ್ಚೆ ಬಣ್ಣದ ವಜ್ರ
ಕ್ಕೆ ಕೆತ್ತಿದ ಹಾಗೆ ಐಮೂಲೆ
ಚೂಪು ಬುಡವನ್ನೊತ್ತಿ ಪುಷ್ಪಪಾತ್ರೆ
ಯ ಅಪ್ಪಿ ಹಿಡಿವ ಈ ಬುಗುರಿ ಪಟೇಲ
ಆಡೊ ಹುಡುಗರ ಅಚ್ಚುಮೆಚ್ಚಿನ ಆಸ್ತಿ
ಈ ಬುಗುರಿಗಾಗಿಯೇ ಹುವ್ವರ್ಚಿ
ಮರದ ಕೆಳಗೆ ಅನೇಕ ಚರ್ಚೆ
ಗಳು ನಡೆದು ನೆಲದ ಮೇಲೆ ತುರುಸಿನ